# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.22/2021**

**ದೋ.ಸಾ. : 23 ಪ್ರಾ.ಸಾ. : 21**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಎಸ್ ಕೆರವಾಡ |
| ತಂದೆಯ ಹೆಸರು | : | ಸಹದೇವ ಕೆರವಾಡ |
| ವಯಸ್ಸು | : | 32 ವರ್ಷ |
| ಕೆಲಸ | : | ಸಿಪಿಸಿ –1291, ಹಳಿಯಾಳ ಪೊಲೀಸ್ ಠಾಣೆ |
| ವಾಸ | : | ಹಳಿಯಾಳ |

**ದಿನಾಂಕಃ 03–02–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:–**

1. ದಿಃ 04.08.2019 ರಿಂದ ದಿಃ05.07.2023 ರವರೆಗೆ ನಾನು ಹೊನ್ನಾವರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 07.06.2021 ರಂದು ಈ ಪ್ರಕರಣದ ತನಿಖಾಧಿಕಾರಿಯಾದ ಚಾ.ಸಾ–39 ರವರು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ವಸ್ತುಗಳಾದ ಒಂದು Redmi ಮೊಬೈಲ್, ಮೃತ ವ್ಯಕ್ತಿಯ, ಆರೋಪಿಯ ಮತ್ತು ಸಾಕ್ಷಿದಾರರ ಭಾವಚಿತ್ರಗಳನ್ನು ಸೀಲು ಮಾಡಿದ ಕವರಿನಲ್ಲಿಟ್ಟು, ಕೋರಿಕೆ ಪತ್ರದೊಂದಿಗೆ ನೀಡಿ ಸದರಿ ವಸ್ತುಗಳನ್ನು ಬೆಂಗಳೂರಿನ FSL ಗೆ ತಲುಪಿಸುವಂತೆ ಸೂಚಿಸಿದ ಮೇರೆಗೆ ಅದೇ ದಿನ ರಾತ್ರಿ ನಾನು ಬೆಂಗಳೂರಿಗೆ ಹೋಗಿ ದಿನಾಂಕ 08.06.2021 ರಂದು ಸದರಿ ವಸ್ತುಗಳನ್ನು FSL ಬೆಂಗಳೂರಿಗೆ ತಲುಪಿಸಿ, ಸ್ವೀಕೃತಿಯನ್ನು ಪಡೆದುಕೊಂಡು, ಮರುದಿನ ಬೆಳಿಗ್ಗೆ ಅಂದರೆ ದಿನಾಂಕ 09.06.2021 ರಂದು ಠಾಣೆಗೆ ಬಂದು FSL ನ ಸ್ವೀಕೃತಿ ಪತ್ರವನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ಪಡೆದುಕೊಂಡು ಬಂದ ಸ್ವೀಕೃತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 91 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದ</u>**

2. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಬೆಂಗಳೂರಿನ FSL ಗೆ ಹೋಗಿಲ್ಲ ಮತ್ತು ಯಾವುದೇ ಸ್ವೀಕೃತಿ ಪ್ರತ್ರವನ್ನು ಪಡೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ನೀಡಿದ ಸೀಲು ಮಾಡಿದ ಕವರಿನಲ್ಲಿ ಏನು ಇತ್ತು ಎಂದು ನಾನು ನೋಡಿರುವುದಿಲ್ಲ. ತನಿಖಾಧಿಕಾರಿಯವರ ಮಾತನ್ನು ಕೇಳಿ ವರದಿಯನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ